# ಪರಮ ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರ ಜೀವನದ ಕೆಲವು ಪ್ರೇರಕ ಪ್ರಸಂಗಗಳು

೧

ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯಲ್ಲಿ ಬರುವ ಒಂದು ಮಹತ್ವಪೂರ್ಣವಾದ ಮಾತು ಸ್ವಾಮಿ ರಂಗನಾಥಾನಂದಜಿಯವರಿಗೆ ತಮ್ಮ ಜೀವನ ಹಾಗೂ ಚಾರಿತ್ರ್ಯವನ್ನು ರೂಪಿಸಿಕೊಳ್ಳುವಲ್ಲಿ ಸಹಾಯಕವಾಯಿತು. ಸ್ವಾಮೀಜಿಯವರನ್ನು ಅವರು ಉದ್ಧರಿಸುತ್ತಾರೆ: 'Can you combine seriousness with childlike naivete ?' ('ಗಂಭೀರತೆಯನ್ನು ಶಿಶುಸಹಜ ಸರಳತೆಯೊಂದಿಗೆ ನೀವು ಹೊಂದಿಸಿಕೊಳ್ಳಬಲ್ಲಿರಾ?') ಅವರು ಮತ್ತೆ ಹೇಳುತ್ತಿದ್ದರು–'naivete' ಎಂದರೆ ಸಂಸ್ಕೃತದಲ್ಲಿ 'ಸರಳತಾ' ಎಂದರ್ಥ. ಅವರು ಎಲ್ಲಿಗೇ ಹೋಗಲಿ, ಅವರ ಸರಳತೆ ಅವರು ಮಕ್ಕಳಿಗೆ ಪ್ರೀತಿಪಾತ್ರರಾಗುವಂತೆ ಮಾಡುತ್ತಿತ್ತು. ಒಂದು ಸಲ ಅವರು ಒಬ್ಬ ಭಕ್ತರ ಮಗುವಿಗೆ ಒಂದು ಹೆಸರನ್ನು ಕೊಟ್ಟರು. ಆ ಮಗು ಬೆಳೆದು ಅದಕ್ಕೆ ಮೂರು ವರ್ಷ ವಯಸ್ಸಾದಾಗ ಅದು 'ಆರತಿ' ಹಾಡಲು ಕಲಿತುಕೊಂಡಿತು. ಒಂದು ಸಲ ಆ ಮಗುವಿನ ಮನೆಯ ಸಮೀಪದ ಆಶ್ರಮ ಕೇಂದ್ರವೊಂದಕ್ಕೆ ಮಹಾರಾಜ್ ಭೇಟಿಯಿತ್ತಾಗ, ಆ ಮಗು ತನ್ನ ಮನೆಯವರೊಂದಿಗೆ ಆಶ್ರಮಕ್ಕೆ ಬಂದಿತು. ಮಹಾರಾಜ್ ಆ ಮಗುವಿನ ಹೆಸರನ್ನು ಮರೆತಿದ್ದರು. ನಿನ್ನ ಹೆಸರೇನೆಂದು ಅವರು ಮಗುವನ್ನು ಕೇಳಿದರು. ಆಗ ಆ ಮಗು ತಕ್ಷಣ ಉತ್ತರಿಸಿತು—"ಇದೇನು! ನೀವೇ ನನಗೆ ಹೆಸರನ್ನು ಕೊಟ್ಟಿರಿ, ಈಗ ನೀವೇ ಮರೆತುಬಿಟ್ಟಿರಾ?" ನಿಜ, ಮಕ್ಕಳು ಪೂಜ್ಯರೊಂದಿಗೆ ಓರಗೆಯ ಗೆಳೆಯರಂತೆ ಬೆರೆಯುತ್ತಿದ್ದರು.

೨

ಸ್ವಾಮಿ ರಂಗನಾಥಾನಂದಜಿ ಕನಸಿನಲ್ಲಿ ಶ್ರೀಮಾತೆಯ ದರ್ಶನ ಪಡೆದ ವಿವರ ಹೀಗಿದೆ. ಮಹಾರಾಜ್ ಸ್ವತಃ ತಾವೇ ಬರೆದಿಟ್ಟಿದ್ದ ಈ ವಿವರಗಳು ಅವರ ಮಹಾಸಮಾಧಿಯ ಬಳಿಕ ಲಭ್ಯವಾಗಿದೆ : "೧೯೬೮ನೇ ಇಸವಿಯ ಜೂನ್ ೨ನೇ ತಾರೀಖು ಪ್ರಾತಃಕಾಲ ೪:೩೦ಕ್ಕೆ ಸ್ಪಷ್ಟವಾದ ಒಂದು ಕನಸನ್ನು ಕಂಡೆ. ಕೆಲವು ಮಂದಿ ಸಂನ್ಯಾಸಿ ಸಹೋದರರೊಂದಿಗೆ ಒಂದು ಆಶ್ರಮದತ್ತ ಹೊರಟಿದ್ದೆ. ಅಲ್ಲಿ ವಿಶೇಷ ಪೂಜೆಗೆ ಏರ್ಪಾಡಾಗಿತ್ತು. ಪೂಜೆಯ ಸಲಕರಣೆಗಳು, ಹೂಗಳು, ನೈವೇದ್ಯ ಇತ್ಯಾದಿಗಳನ್ನು ಆಗಲೇ ಸಿದ್ಧಮಾಡಲಾಗಿತ್ತು; ಇನ್ನೂ ಕೆಲವನ್ನು ಸಿದ್ಧಗೊಳಿಸುತ್ತಿದ್ದರು. ಪೂಜೆಗೋಸ್ಕರ ಪ್ರತ್ಯೇಕವಾಗಿ ಇಟ್ಟಿದ್ದ ಪಾತ್ರೆಗಳು, ಶ್ರೀರಾಮಕೃಷ್ಣರ, ಶ್ರೀಮಾತೆಯವರ ಹಾಗೂ ಸ್ವಾಮೀಜಿಯವರ ಚಿತ್ರಪಟಗಳನ್ನೂ ಅದೇ ಸಭಾಂಗಣದಲ್ಲಿ ಜೋಡಿಸಿ ಇಡಲಾಗಿತ್ತು. ನಾನು ಸಂಗಡಿಗರ ಒಂದು ಗುಂಪಿನೊಂದಿಗೆ ಶ್ರೀಮಾತೆಯ ಚಿತ್ರಪಟದ ಬಳಿಗೆ ಪ್ರಣಾಮ ಮಾಡಲು ಹೋದೆ. ನಾನು ನಮಸ್ಕರಿಸಿದ ತಕ್ಷಣ ಶ್ರೀಮಾತೆ ಆ ಚಿತ್ರದಿಂದ ಜೀವಂತವಾಗಿ ಹೊರಬಂದು ನನ್ನನ್ನು ಸ್ಪರ್ಶಿಸಿ, ಇನ್ನೂ ತೊಳೆಯದೆ ಉಳಿದಿದ್ದ ಪೂಜಾಪಾತ್ರೆಗಳನ್ನು ತೊಳೆಯಲು ಹೇಳಿದರು. ನನ್ನ ಮುಂದಿದ್ದುದು ಬರೀ ಚಿತ್ರವಲ್ಲ; ಅದು ಎಲ್ಲವನ್ನೂ ಪ್ರೀತಿಸುವ ಜೀವಂತ ಮಾತೆಯೇ ಎಂದು ನಾನು ಅರಿತಾಗ ಆ ಸ್ಪರ್ಶ ನನ್ನೊಳಗೆ ಹರ್ಷದ ಪುಳಕವನ್ನೆಬಿಸಿತು. ಅದೆಂತಹ ಆನಂದ! ನಾನು ನನ್ನ ತಲೆಯನ್ನು ಶ್ರೀಮಾತೆಯ ಮಡಿಲಲ್ಲಿ ಇರಿಸಿದೆ, ಮತ್ತೆ ಮತ್ತೆ ಆಕೆಗೆ ಪ್ರಣಾಮ ಸಲ್ಲಿಸಿದೆ. ಅಳುತ್ತಾ ಆಕೆಯನ್ನು ಪ್ರಾರ್ಥಿಸಿದೆ–'ಕಡೆಯ ಪಕ್ಷ ಪ್ರತಿದಿನವೂ ಒಂದು ಬಾರಿಯಾದರೂ ನೀನು ನಿನ್ನ ಜೀವಂತ ಹಾಗೂ ಪ್ರೇಮಪೂರ್ಣ ರೂಪವನ್ನು ನನಗೆ ತೋರಿಸು'–ಎಂದು. ತಾಯಿ ಅದಕ್ಕೊಪ್ಪಿದರು. ಅನಂತರ ಆಕೆ ತನ್ನ ಅವರ್ಣನೀಯ ಪ್ರೇಮ, ಮಾರ್ದವತೆಗಳ ಮುಖಭಾವದಿಂದ ತನ್ನ ತೋಳುಗಳಲ್ಲಿ ನನ್ನನ್ನು ಆಲಂಗಿಸಿಕೊಂಡಳು. ನಾನು ಪೂಜಾ ಪಾತ್ರೆಗಳನ್ನು ತೊಳೆಯಲು ಅತ್ಯಂತ ಆನಂದ, ಧನ್ಯತೆಯ ಭಾವದಿಂದ ಹೋದೆ. ಅಷ್ಟರಲ್ಲಿ ನಾನು ಕನಸಿನಿಂದ ಎಚ್ಚೆತ್ತೆ. ತುಂಬಾ ಆನಂದದಿಂದಿದ್ದ ನಾನು ಕೋಣೆಯಲ್ಲಿದ್ದ ಗುರುಮಹಾರಾಜರ, ಸ್ವಾಮಿ ಬ್ರಹ್ಮಾನಂದರ ಚಿತ್ರದ ಕಡೆಗೆ ಪ್ರಾರ್ಥನೆಯ ಭಾವದಿಂದ ನೋಡಿದೆ. ಗಡಿಯಾರ ನೋಡಿದೆ —ಆಗ ಬೆಳಿಗ್ಗೆ ೪:೩೫. ಇದು ಮೊದಲ ಬಾರಿ ನನಗಾದ ಶ್ರೀಮಾತೆಯ ಕನಸು. ಗುರುಮಹಾರಾಜರ ಕನಸಿನಿಂದ ನಾನು ಧನ್ಯನಾದದ್ದು ಮಾಯಾವತಿಯಲ್ಲಿ; ಅಲ್ಲಿಗೆ ನಾನು ಕೊನೆಯ ಬಾರಿ ಭೇಟಿಯಿತ್ತಾಗ–೧೯೫೨ರಲ್ಲಿ ಅಥವಾ ೧೯೬೦ರಲ್ಲಿ. ಪುನಃ ಆ ರೀತಿ ಕನಸು ರಾಮಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಲ್ಲಿ ೧೯೬೩ರಲ್ಲಿ ಆಗಿತ್ತು. ಬರೆದಿಟ್ಟುಕೊಂಡ ವೇಳೆ ೧೧:೩೦. ದಿನಾಂಕ ೦೨.೦೬.೧೯೬೮. –ರ.'

೩

ಮಹಾರಾಜ್ ಜಗತ್ತಿನುದ್ದಗಲ ಹಲವಾರು ಬಾರಿ ಪ್ರಯಾಣ ಮಾಡಿದ್ದರೂ ಕೂಡ ಅವರ ಮುಂದೆ ಯಾವಾಗಲೂ ತ್ಯಾಗ ಸೇವೆಗಳ ಆದರ್ಶ ಉಜ್ವಲವಾಗಿತ್ತು. ಸಂನ್ಯಾಸಿಯ ಆದರ್ಶಕ್ಕೆ ತಕ್ಕಂತೆ ಅವರು ತಮ್ಮೊಂದಿಗೆ ಹಣವನ್ನು ಒಯ್ಯುತ್ತಿರಲಿಲ್ಲ. ಸಂಪೂರ್ಣ ಭಗವಂತನನ್ನೇ ಆಶ್ರಯಿಸಿಕೊಂಡಿರುತ್ತಿದ್ದರು. ಇದರಿಂದ ತಮಗೆ ಯಾವುದೇ ಕಷ್ಟವಾದದ್ದಿಲ್ಲ ಎಂದು ಅವರು ಹೇಳುತ್ತಿದ್ದರು. ಆದರೆ ಒಂದು ಸಂದರ್ಭದಲ್ಲಿ ತುಸು ಕಷ್ಟವಾಯಿತು. ಒಂದು ಸಲ ಆಸ್ಟ್ರೇಲಿಯಾದ ಸಿಡ್ನಿ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಮಹಾರಾಜರು ನೋಡುತ್ತಾರೆ—ಅವರನ್ನು ಕರೆದುಕೊಂಡು ಹೋಗಲು ಯಾರೂ ಬಂದಿಲ್ಲ. ತಮ್ಮೊಂದಿಗೆ ಹಣವನ್ನು ಒಯ್ಯುವ ಅಭ್ಯಾಸ ಇಲ್ಲದಿದ್ದರಿಂದ,

ಫೋನ್ ಮಾಡುವುದಕ್ಕೂ ಅವರಿಗೆ ಸಾಧ್ಯವಾಗಲಿಲ್ಲ. ವಿಮಾನ ನಿಲ್ದಾಣದ ಒಂದು ಬೆಂಚಿನಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿಯ ಬಳಿಗೆ ಹೋದರು. ಸನ್ನಿವೇಶ ಹೀಗಿದೆ ಎಂದು ವಿವರಿಸಿದರು. ಫೋನ್ ಮಾಡಲು ಒಂದು ನಾಣ್ಯ ಕೊಡಬೇಕೆಂದು ಬೇಡಿ ಕೊಂಡರು. ಆದರೆ ಆ ವ್ಯಕ್ತಿ ಒರಟಾಗಿ ನಡೆದುಕೊಂಡ. ಆಗ ಇದೆಲ್ಲವನ್ನೂ ನೋಡುತ್ತಿದ್ದ ಮಹಿಳೆಯೊಬ್ಬಳು ಅವರತ್ತ ಬಂದು ಏನಾದರೂ ಸಹಾಯ ಬೇಕಿತ್ತೇ ಎಂದು ಕೇಳಿದಳು. ಆಗ ಮಹಾರಾಜ್, ತನಗೆ ಕೇವಲ ಐವತ್ತು ಸೆಂಟ್ ಮಾತ್ರ ಬೇಕಿತ್ತು, ಒಂದು ಫೋನ್ ಕರೆಗಾಗಿ–ಎಂದರು. ಆಕೆ ಹಣಕೊಟ್ಟಳು; ಮಹಾರಾಜ್ ಫೋನ್ ಮಾಡಿದರು.

೪

ದೇವಾಲಯದಲ್ಲಿ ಸಂಪೂರ್ಣ ನೀರವತೆಯನ್ನು ಪಾಲಿಸು ವುದು ರಾಮಕೃಷ್ಣ ಸಂಘದ ಶಾಖೆಗಳ ಪದ್ಧತಿ. ಒಂದು ಸಲ ಹೈದರಾಬಾದ್ ರಾಮಕೃಷ್ಣ ಆಶ್ರಮದ ದೇವಾಲಯದ ಧ್ಯಾನ ಮಂದಿರದಲ್ಲಿ ಕೆಲವು ಮಂದಿ ಭಕ್ತರು ಏರಿದ ದನಿಯಲ್ಲಿ ಮಾತನಾಡುತ್ತಿದ್ದರು. ಆಗ ಶ್ರೀರಾಮಕೃಷ್ಣರ ಶಯನ ಮಂದಿರದಲ್ಲಿದ್ದ ಪೂಜಾರಿಗಳು ಹೊರಗೆ ಬಂದು, ತುಸು ಮೆಲುದನಿಯಲ್ಲಿ ಮಾತನಾಡಿರೆಂದು ಅವರನ್ನು ಕೇಳಿಕೊಂಡರು. ಆಗ ಭಕ್ತರು, ದೇವಾಲಯದಲ್ಲಿ ಬೇರೆ ಯಾರೂ ಇಲ್ಲವಲ್ಲ, ಮಾತನಾಡಿದರೆ ತಪ್ಪೇನು ಎಂದು ವಾದಕ್ಕಿಳಿದರು. ಆಗ ಬ್ರಹ್ಮಚಾರಿ ತುಸು ಒರಟಾಗಿಯೇ ಹೇಳಿದರು, 'ದೇವಾಲಯದ ಗರ್ಭಮಂದಿರದ ಹಿಂಭಾಗದಲ್ಲಿ ಯಾರಾದರೂ ಧ್ಯಾನ ಮಾಡುತ್ತಿರಬಹುದಲ್ಲ' ಎಂದು. ಆ ಭಕ್ತರು ಸುಮ್ಮನಾದರು. ಒಂದು ಅಥವಾ ಎರಡು ತಿಂಗಳ ಬಳಿಕ ಮಹಾರಾಜ್ ಆ ಪೂಜಾರಿಗಳನ್ನು ಕರೆದು ಹೇಳಿದರು–'ಭಕ್ತರೊಂದಿಗೆ ಇಷ್ಟೊಂದು ಒರಟಾಗಿ ವರ್ತಿಸುವುದೇಕೆ ಅಂತ ಹೆಡ್‌ಕ್ವಾರ್ಟರ್ಸ್(ಅಂದರೆ ಕಲ್ಕತ್ತಾದಲ್ಲಿರುವ ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರ) ತಿಳಿಯಬಯಸುತ್ತದೆ.' ಏನೇನು ನಡೆಯಿತೋ ಅದನ್ನು ಅಂತೆಯೇ ವಿವರಿಸಿದರು ಪೂಜಾರಿಗಳು. ಎಲ್ಲವನ್ನೂ ಕೇಳಿದ ಮಹಾರಾಜ್ ಯಾವುದೋ ಕಡತದಿಂದ ಒಂದು ಕಾಗದವನ್ನು ತೆಗೆದು ಅದನ್ನು ಪೂಜಾರಿಗೆ ಕೊಟ್ಟು, ಓದಲು ಹೇಳಿದರು. ಅದರಲ್ಲಿ **'Speak Gently'** (ಮೃದುವಾಗಿ ಮಾತಾಡು) ಎಂಬ ಡೇವಿಡ್ ಬ್ಯಾಟ್ಸ್‌ನ ಕವನವಿತ್ತು. ಅದರ ಮೊದಲ ಸಾಲುಗಳು ಹೀಗಿವೆ:

ಮಾತಾಡು ಮೃದುವಾಗಿ; ಪ್ರೀತಿಯಿಂದಾಳುವುದು
ಭಯಕಿಂತ ಒಳಿತೆಂದಿಗೂ;
ಮಾತಾಡು ಮೃದುವಾಗಿ; ಕಟುನುಡಿಗೆ ಕೆಡದಿರಲಿ
ನಾವಿಲ್ಲಿ ಗೈಯುವಾ ಒಳಿತೆಂದಿಗೂ.

೫

ಮಹಾರಾಜ್ ಸಂಪೂರ್ಣ ಏಕಾಗ್ರತೆಯಿಂದ ಓದುತ್ತಿದ್ದರು. ಒಂದು ಸಲ ಅವರು ಓದಲಾರಂಭಿಸಿದರೆ ಕಾಲ, ದೇಶಗಳ ಪರಿವೆಯೇ ಅವರಿಗಿರುತ್ತಿರಲಿಲ್ಲ. ಒಂದು ಸಲ ಒಬ್ಬರು ಹಿರಿಯ ಸಾಧುಗಳು ಮಹಾರಾಜರಿಗೆ ಪ್ರಣಾಮ ಮಾಡಲು ಅವರ ಬಳಿಗೆ ಹೋದರು. ಮಹಾರಾಜರು *Sri Ramakrishna, The Great Master* ಕೃತಿಯನ್ನು ಓದುವುದರಲ್ಲಿ ಮುಳುಗಿದ್ದುದನ್ನು ಅವರು ಗಮನಿಸಿದರು. ಅವರ ಓದಿಗೆ ಭಂಗವನ್ನು ಉಂಟು ಮಾಡಬಾರದೆಂದು ಆ ಸಾಧುಗಳು ಕಾಯುತ್ತಾ ನಿಂತರು. ಸ್ವಲ್ಪ ಹೊತ್ತಾದ ಬಳಿಕ ಮಹಾರಾಜರು ಅವರತ್ತ ನೋಡಿದರು. ಚಕಿತರಾಗಿ ಅವರು ಕೇಳಿದರು–'ಯಾವಾಗ ಬಂದಿರಿ? ನನ್ನನ್ನೇಕೆ ಕರೆಯಲಿಲ್ಲ?' ಪೂಜ್ಯರಿಗೆ ಓದನ್ನು ಬಿಟ್ಟಿರಲು ಸಾಧ್ಯವಾಗುತ್ತಿರಲಿಲ್ಲ. ಅವರ ಆರೋಗ್ಯ ಅತ್ಯಂತ ಕೆಟ್ಟಿದ್ದಾಗಲೂ ಕೂಡ ಇತರರಿಂದ ಓದಿಸುತ್ತಿದ್ದರು. ತಮ್ಮ ವಯಸ್ಸಿನ ಕೊನೆಯ ವರ್ಷಗಳಲ್ಲೂ ಕೂಡ ಪುಸ್ತಕದ ಅಂಚುಗಳಲ್ಲಿ ಗುರುತು ಮಾಡುತ್ತಿದ್ದರು. ಪುಸ್ತಕದ ಪ್ರಧಾನ ಭಾಗಗಳಲ್ಲಿ ಅಡಿಗೆರೆ ಎಳೆಯುತ್ತಿದ್ದರು. ಎಷ್ಟು ಬೇಕೋ ಅಷ್ಟೇ ಮಾತನಾಡುತ್ತಿದ್ದರು. ಅವರು ಬಹಳ ಎಳೆಯ ವಯಸ್ಸಿನಲ್ಲೇ **ಯೋಗಸ್ಯ ಪ್ರಥಮಂ ದ್ವಾರಂ ವಾಕ್ ನಿರೋಧಃ**—'ಮಾತಿನ ಸಂಯಮವೇ ಯೋಗದ ಹೆಬ್ಬಾಗಿಲು' ಎಂಬುದನ್ನು ಓದಿದ್ದರು. ಅನಗತ್ಯ ಮಾತುಗಳ ಮೂಲಕ ಮನಸ್ಸಿನ ಶಕ್ತಿ ವ್ಯರ್ಥವಾಗುವುದನ್ನು ಅವರು ಬಯಸುತ್ತಿರಲಿಲ್ಲ.

೬

ಭಕ್ತಾದಿಗಳ ಪ್ರಣಾಮದ ನಂತರ ಮಧ್ಯಾಹ್ನ ೧೨ ಘಂಟೆಗೆ ಅವರು ಊಟ ಮಾಡುತ್ತಿದ್ದರು. ಅವರು ತೆಗೆದುಕೊಳ್ಳುತ್ತಿದ್ದ ಆಹಾರದ ಪ್ರಮಾಣ ಮತ್ತು ಅದರ ರುಚಿ ಹೇಗಿರುತ್ತಿತ್ತೆಂದರೆ ಬೇರೆ ಯಾರೇ ಆದರೂ ಒಂದು ಅಥವಾ ಎರಡು ದಿನಗಳಲ್ಲೇ ಊಟ ನಿಲ್ಲಿಸಿಬಿಡುತ್ತಿದ್ದರು. ಅವರು ಊಟವನ್ನೆಂದಿಗೂ ತಮ್ಮ ದೈನಂದಿನ ಚಟುವಟಿಕೆಯ ಒಂದು ಮುಖ್ಯ ಅಂಗವಾಗಿ ಎಣಿಸಿರಲಿಲ್ಲ. ಅವರೇ ಹೇಳುತ್ತಿದ್ದರು,'ನಾನು ಕೇವಲ ದಿನಚರಿ ಪೂರೈಸಲು ಮಾತ್ರ ಊಟ ಮಾಡುತ್ತೇನೆ' ಮಧ್ಯಾಹ್ನ ವಿಶ್ರಾಂತಿಯ ಬಳಿಕ ಮತ್ತೆ ಅವರು ತಾವು ಓದುತ್ತಿದ್ದ ಪುಸ್ತಕಗಳತ್ತ ಮರಳುವರು. ಸಂಜೆ ೪:೩೦ಕ್ಕೆ ವೈದ್ಯರ ಸಲಹೆಗನುಸಾರವಾಗಿ ವ್ಯಾಯಾಮ ಮಾಡುತ್ತಿದ್ದರು. ಅನಂತರ 'ಕಥಾಮೃತ' (*ವಚನವೇದದ* ಬಂಗಾಳಿ ಮೂಲ) ಓದುವರು. ಬಳಿಕ ಭಕ್ತರ ಪ್ರಣಾಮಗಳನ್ನು ಸ್ವೀಕರಿಸುತ್ತಿದ್ದರು. ಅನಂತರ ಜಪಕ್ಕೆ ಕುಳಿತು ಕೊಳ್ಳುತ್ತಿದ್ದರು. ಕೆಲವೊಮ್ಮೆ–೯೦ನೇ ವಯಸ್ಸಿನಲ್ಲೂ–ಅವರ ಕಟ್ಟುನಿಟ್ಟಾದ ದಿನಚರಿಯನ್ನು ನೋಡಿದ ಅವರ ಸೇವಕರು ಮಲಗಿಕೊಂಡೇ ಜಪಮಾಡುವಂತೆ ಅವರನ್ನು ಕೇಳಿಕೊಳ್ಳು ತ್ತಿದ್ದರು. ಕೂಡಲೇ ಮಹಾರಾಜ್ ಹೇಳಿದರು–"ಇಲ್ಲ, ಇಲ್ಲ. ಕುಳಿತುಕೊಂಡೇ ಜಪ ಮಾಡುವೆ." ಪುನಃ ಸ್ವಲ್ಪ ಹೊತ್ತು ಅವರು ಓದುವರು; ಅನಂತರ ರಾತ್ರಿ ೯.೦೦ಕ್ಕೆ ಊಟ ಮಾಡುವರು. ರಾತ್ರಿ ಸುಮಾರು ೯:೪೫ಕ್ಕೆ ಮಲಗುತ್ತಿದ್ದರು.

(ಸಂಗ್ರಹ : ಬ್ರ. ಅದ್ವೈತ ಚೈತನ್ಯ)